ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 01ಎಸ್‌ಪಿಎಸ್ (01) 2017

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ21/02/2018

# ಸುತ್ತೋಲೆ

ವಿಷಯ: 2017-18 ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಮತ್ತು ಸರ್ಕಾರಿ/ಅನುದಾನಿತ ಇಂಜಿನೀಯರಿಂಗ್ ಹಾಗೂ ಆರ್ಕಿಟೆಕ್ಚರ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ಕಲಿಕಾ ಸಾಮಗ್ರಿಯಾಗಿ ಒದಗಿಸುವ ಬಗ್ಗೆ.

ಉಲ್ಲೇಖ: ಆಯಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಕಾಶಿಇ/ಮಾತಂವಿ/57/ಲ್ಯಾಪ್‌ಟಾಪ್‌ವಿತರಣೆ/2017-18 ದಿ:20/02/2018

********

ಉಲ್ಲೇಖದ ಪತ್ರದಲ್ಲಿ 2017-18 ನೇ ಸಾಲಿನಲ್ಲಿ ಪ್ರವೇಶ ಪಡೆದಿರುವ ಎಲ್ಲಾ ವರ್ಗಗಳ ಅರ್ಹ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣಾ ಯೋಜನೆಯನ್ನು ಲ್ಯಾಪ್‌ಟಾಪ್ ನೀಡುವ ಮೂಲಕ ಸಾಂಕೇತಿಕವಾಗಿ ಯೋಜನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಯೋಜನೆಯನ್ನು ದಿ:27 ನೇ ಫೆಬ್ರವರಿ 2018 ರಂದು ಸಂಜೆ 4.30 ಗಂಟೆಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಉದ್ಘಾಟಿಸಲಿದ್ದು ಸರ್ಕಾರಿ/ ಅನುದಾನಿತ ಇಂಜಿನೀಯರಿಂಗ್, ಆರ್ಕಿಟೆಕ್ಚರ್ ಕಾಲೇಜುಗಳ ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಪಡೆದಿರುವ ರೂ.2.5 ಲಕ್ಷ ಆದಾಯಮಿತಿಯ ಅರ್ಹ ವಿದ್ಯಾರ್ಥಿಗಳಲ್ಲಿ ಒಬ್ಬ ವಿದ್ಯಾರ್ಥಿಗೆ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಆಯಾ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳ ಪೈಕಿ ಒಬ್ಬರನ್ನು ಪಾರದರ್ಶಕವಾಗಿ ಆಯ್ಕೆ ಮಾಡಿ ಕರೆತರಲು ತಿಳಿಸಲಾಗಿದೆ. ಆಯ್ಕೆಗೊಂಡ ವಿದ್ಯಾರ್ಥಿ/ವಿದ್ಯಾಥಿನಿಯ ಜೊತೆ ಕಾಲೇಜಿನ/ಸಂಸ್ಥೆಯ ಒಬ್ಬ ಅದ್ಯಾಪಕರು ಸಹ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ದಿನಾಂಕ 27 ನೇ ಫೆಭ್ರವರಿ2018 ರಂದು ಅಪರಾಹ್ನ 12 ಗಂಟೆಗೆ ಎಸ್.ಜೆ. ಪಾಲಿಟೆಕ್ನಿಕ್(ರಾಸಾಯನಿಕ ವಿಭಾಗ) ಕೆ.ಆರ್.ವೃತ್ತ ಬೆಂಗಳೂರು ಇಲ್ಲಿನ ಸಭಾಂಗಣದಲ್ಲಿ ಹಾಜರಿರಲು ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗಿರುತ್ತದೆ.

ಆದ್ದರಿಂದ 2017-18 ನೇ ಸಾಲಿನಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ ವಾರ್ಷಿಕ ವರಮಾನ ರೂ. 2.5 ಲಕ್ಷ ಆದಾಯ ಮಿತಿಯೊಳಗಿನ ಎಲ್ಲಾ ವರ್ಗದ ವಿದ್ಯಾರ್ಥಿಗಳನ್ನು ಒಂದು ಕೊಠಡಿಯಲ್ಲಿ ಕೂರಿಸಿ, ಆ ವಿದ್ಯಾರ್ಥಿಗಳ ಹೆಸರು, ವಿಭಾಗವನ್ನು ಒಂದು ಚೀಟಿಯಲ್ಲಿ ವಿದ್ಯಾರ್ಥಿಗಳಂದಲೇ ಬರೆಸಿ ಸುರುಳಿ ಸುತ್ತಿ ಡಬ್ಬದಲ್ಲ ಹಾಕಿ ಎಲ್ಲಾ ವಿದ್ಯಾರ್ಥಿಗಳು ತಮ್ಮ ತಮ್ಮ ಹೆಸರುಗಳನ್ನ ಬರೆದ ಚೀಟಿಯನ್ನು ಹಾಕಿದ ನಂತರ, ಚೀಟಿಯ ಡಬ್ಬವನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಕಾಣುವಂತೆ ಇಟ್ಟು ಪ್ರಾಂಶುಪಾಲರು, ವಿಭಾಗಾಧಿಕಾರಿಗಳು ಹಾಗೂ ನಿಯೋಜಿಸಲ್ಪಡುವ ಅಧ್ಯಾಪಕ ಸಿಬ್ಬಂದಿ ಇವರುಗಳ ಉಪಸ್ಥಿತಿಯಲ್ಲಿ ಯಾರಾದರೂ ಒಬ್ಬ ವಿದ್ಯಾರ್ಥಿಯನ್ನು ಕರೆದು ಆ ವಿದ್ಯಾಥಿಗೆ ಯಾವುದಾದರೂ ಚೀಟಿಯನ್ನು ಡಬ್ಬದಿಂದ ತೆಗೆಯುವಂತೆ ತಿಳಿಸಿ ಹಾಜರಿದ್ದ ಎಲ್ಲರ ಸಮ್ಮುಖದಲ್ಲಿ ಲಾಟರಿ ಮೂಲಕ ಆಯ್ಕೆಯಾದ ವಿದ್ಯಾರ್ಥಿಯ ಹೆಸರನ್ನು ಘೋಷಿಸುವುದು. ಆಯ್ಕೆಯಾದ ವಿದ್ಯಾರ್ಥಿಯನ್ನು ನಿಯೋಜಿತ ಅಧ್ಯಾಪಕರೊಡನೆ ದಿ:27/02/2018 ಅಪರಾಹ್ನ 12 ಗಂಟೆಗೆ ಎಸ್.ಜೆ. ಪಾಲಿಟೆಕ್ನಿಕ್(ರಾಸಾಯನಿಕ ವಿಭಾಗ) ಕೆ.ಆರ್.ವೃತ್ತ ಬೆಂಗಳೂರು ಇಲ್ಲಿನ ಸಭಾಂಗಣದಲ್ಲಿ

ಕಡ್ಡಾಯವಾಗಿ ಹಾಜರಾಗುಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಪ್ರಾಂಶುಪಾಲರಿಗೆ ಈ ಮೂಲಕ ಆದೇಶಿಸಲಾಗಿದೆ.

ವಿದ್ಯಾರ್ಥಿಯ ಆಯ್ಕೆ ಪ್ರಕ್ರಿಯೆಯು ಸಂಪೂರ್ಣ ಪಾರದರ್ಶಕವಾಗಿರಬೇಕು ಹಾಗೂ ಈಸಂಬಂಧ ಯಾವುದೇ ರೀತಿಯ ದೂರುಗಳು ಬಾರದಂತೆ ಕ್ರಮವಹಿಸುವುದು.ಮೇಲ್ಕಂಡ ಕಾರ್ಯಕ್ರಮಕ್ಕೆ ಆಗಮಿಸುವ ಅರ್ಹವಿದ್ಯಾರ್ಥಿಯ ಹೆಸರು ಮತ್ತು ನಿಯೋಜಿತ ಅಧ್ಯಾಪಕರ ಹೆಸರನ್ನು ದಿ:23/02/2018 ರೊಳಗೆ ಈಕೆಳಗಿನ ಇ-ಮೇಲ್ ವಿಳಸಕ್ಕೆ ಕಳುಹಿಸುವಂತೆ ಪ್ರಾಚಾರ್ಯರುಗಳಗೆ ಈ ಮೂಲಕ ಸೂಚಿಸಲಾಗಿದೆ.

**sps.dte@ gmail.com**

**srinivas.uvse@ gmail.com**

ನಿರ್ದೇಶಕರು

ಪ್ರತಿ:

1.ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳು ಮತ್ತು ಸರ್ಕಾರಿ/ಅನುದಾನಿತ ಇಂಜಿನೀಯರಿಂಗ್ ಕಾಲೇಜುಗಳ ಪ್ರಿಬ್ಸಿಪಾಲರುಗಳಗೆ ಸೂಕ್ತ ಕ್ರಮಕ್ಕಾಗಿ

2. ಇ-ಆಡಳಿತ ವಿಭಾಗಕ್ಕೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.